ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 48/2018

(ಫ್ರಾಸಾ-1 ಚಾಸಾ-1)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 14.10.2024.

| | | |
|---|---|---|
| ಸಾಕ್ಷಿದಾರರ ಹೆಸರು | - | ವೆಂಕಟೇಶ್ |
| ತಂದೆಯ ಹೆಸರು | - | ವೀರಭದ್ರ |
| ವಯಸ್ಸು | - | 50 ವರ್ಷ, |
| ಉದ್ಯೋಗ | - | ವ್ಯವಸಾಯ |
| ವಾಸ | - | ಬಸವನಪುರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಮೃತ ಮಂಜುನಾಥ ಮತ್ತು ಆರೋಪಿತರ ಪರಿಚಯ ನನಗೆ ಇಲ್ಲ. ಈಗ ನಾನು ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು. ಈಗ ಸುಮಾರು 4-5 ವರ್ಷಗಳ ಹಿಂದೆ ಬೆಳಗ್ಗೆ 9 ಘಂಟೆಯ ಸಮಯದಲ್ಲಿ ನಾನು ಬಸವನಪುರ ರಸ್ತೆಯಿಂದ ಆನೇಕಲ್ ಗೆ ಕಾರಿನಲ್ಲಿ ಹೋಗುತ್ತಿದ್ದಾಗ ಪೋಲಿಸರು ಸುಣವಾರ ಗ್ರಾಮದ ನಾರಾಯಣರೆಡ್ಡಿ ಜಮೀನಿನ ಹತ್ತಿರ ನನ್ನನ್ನು ಕರೆದಿದ್ದರಿಂದ ನಾನು ಹೋಗಿ ಕೇಳಿದ್ದು ಪೋಲಿಸರು ಅಲ್ಲಿ ಒಂದು ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದರು. ಯಾವ ಕಾರಣಕ್ಕಾಗಿ ಪೋಲಿಸರು ನನ್ನ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ಯಾವ ಕಾರಣಕ್ಕಾಗಿ ಸದರಿ ಸ್ಥಳಕ್ಕೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಪೋಲಿಸರನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರು ಇರಲಿಲ್ಲ. ಸ್ಥಳದಲ್ಲಿ ನಾನು ಬೇರೆ ಏನನ್ನೂ ನೋಡಿರುವುದಿಲ್ಲ.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಸೀಲ್ ಮಾಡಿದ ವಸ್ತುಗಳನ್ನು ತೆರೆಯಲು ಅನುಮತಿ ಕೋರಿದ್ದು ಅವುಗಳು ಸೀಲ್ ಆಗಿದ್ದು ತೆರೆಯಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2. ನಾನು ದಿಃ11.10.2017 ರಂದು ಸುಣವಾರ ಗ್ರಾಮದ ನಾರಾಯಣರೆಡ್ಡಿರವರ ಜಮೀನಿನ ಪಕ್ಕದ ರಸ್ತೆಯಲ್ಲಿ ಹೋಗುತ್ತಿದ್ದಾಗ ತುಂಬಾ ಜನರು ಇದ್ದಿದ್ದನ್ನು ನೋಡಿ ನಾನು ಹೋಗಿ ನೋಡಲಾಗಿ ಬಲಭಾಗದ ಕಾಲುವೆಯ ಪಕ್ಕದಲ್ಲಿ ಒಂದು ಗಂಡಸಿನ ಹೆಣ ಮಗ್ಗುಲಾಗಿ ಮಕಾಡೆಯಾಗಿ ಬಿದ್ದಿದ್ದು ರಕ್ತಗಾಯಗಳಾಗಿದ್ದು ಸ್ಥಳದಲ್ಲಿ ಒಂದು ಹವಾಯಿ ಚಪ್ಪಲಿ ಮತ್ತು ಒಂದು ಟೋಪಿ ಬಿದ್ದಿದ್ದು ಮೃತನ ಮೈ ಮೇಲೆ ಒಂದು ಪ್ಯಾಂಟ್ ಶರ್ಟ್ ಇದ್ದು ಆತನ ವಯಸ್ಸು ಸುಮಾರು 30-35 ವರ್ಷ ಇದ್ದು ಮೃತ ದೇಹವನ್ನು ನೋಡಿದಾಗ ಯಾವುದೇ ಆಯುಧದಿಂದ ಹೊಡೆದು ಸಾಯಿಸಿರುವ ಬಗ್ಗೆ ಕಂಡು ಬಂದಿತ್ತು ಎಂದರೆ ಸರಿಯಲ್ಲ. ಅದೇ ದಿನ ಈಗ ಓದಿ ಹೇಳಿದಂತೆ ನಾನು ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ನಂತರ ದಿಃ09.11.2017 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದು ಆಗ ಆರೋಪಿತರನ್ನು ತೋರಿಸಿದ್ದು ಅವರು ನಮ್ಮ ಪಕ್ಕದ ಗ್ರಾಮದ ಊರಿನವರಾಗಿರುತ್ತಾರೆ ಎಂದು ನಾನು ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಆಗ ಪೋಲಿಸರು ಸದರಿ ಆರೋಪಿತರು ಮಂಜುನಾಥ ಇವರನ್ನು ದೊಣ್ಣೆಯಿಂದ ಹೊಡೆದು ಸಾಯಿಸಿರುತ್ತಾರೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ "ನಾನು ದಿಃ11.10.2017 ರಂದು ------------- ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ" ನಾನು ಪೋಲಿಸರ ಮುಂದೆ ಮುಂದುವರಿದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-2 ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲುಃ</u>** 1 ನೇ ಆರೋಪಿ ಪರ ಶ್ರೀ ಎಂ ಆರ್ ಎಂ ಹಾಗೂ 2 ಮತ್ತು 3 ನೇ ಆರೋಪಿತರ ಪರ ಶ್ರೀ ಹೆಚ್ ಜಿ ಕೆ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು